**Udayavani 05-06-2016**

ಮಾಹಿತಿ ಕೇಂದ್ರ ಉದ್ಘಾಟನೆ

# ಕೃಷಿಯನ್ನು ಲಾಭದಾಯಕವಾಗಿಸಿ

## ■ ಕೃಷಿಯನ್ನು ಕೈಗಾರಿಕಾ ಕ್ಷೇತ್ರದಂತೆ ಬದಲಾಯಿಸಿ ವೈಜ್ಞಾನಿಕತೆ- ತಾಂತ್ರಿಕತೆ ಅಳವಡಿಸಿ: ಡಾ| ಪ್ರಕಾಶ ಕಮ್ಮರಡಿ

**ಶಿವಮೊಗ್ಗ:** ಕೃಷಿ ಎಂಬುದು ನಷ್ಟದ ಕ್ಷೇತ್ರವಲ್ಲ, ಬದಲಾಗಿ ಇದನ್ನು ಲಾಭದಾಯಕ ಎಂದು ತೋರಿಸುವುದು ರಾಜ್ಯ ಕೃಷಿ ಬೆಲೆ ಆಯೋಗದ ಜವಾಬ್ದಾರಿಯಾಗಿದ್ದು, ಇದನ್ನು ಕಾರ್ಯರೂಪಕ್ಕೆ ತರಲು ಎಲ್ಲ ರೀತಿಯ ಯತ್ನ ನಡೆಸುತ್ತಿದೆ ಎಂದು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ| ಟಿ.ಎನ್. ಪ್ರಕಾಶ್ ಕಮ್ಮರಡಿ ಹೇಳಿದರು.

ಇಲ್ಲಿನ ನವುಲೆಯಲ್ಲಿರುವ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದಲ್ಲಿ ವಿವಿ ಮತ್ತು ರಾಜ್ಯ ಕೃಷಿ ಬೆಲೆ ಆಯೋಗದ ಸಂಯುಕ್ತ ಆಶ್ರಯದಲ್ಲಿ ಸ್ಥಾಪಿಸಲಾದ ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ಮಾಹಿತಿ ಕೇಂದ್ರ ಉದ್ಘಾಟಿಸಿ ಅವರು ಮಾತನಾಡಿದರು.

ಕೃಷಿ ಕ್ಷೇತ್ರ ಕೈಗಾರಿಕಾ ಕ್ಷೇತ್ರದಂತೆ ಬದಲಾಗಬೇಕು. ವೈಜ್ಞಾನಿಕತೆ ಮತ್ತು ತಾಂತ್ರಿಕತೆಯನ್ನು ಅಳವಡಿಸಿಕೊಳ್ಳಬೇಕು. ಯಾಂತ್ರೀಕರಣಕ್ಕೆ ಒತ್ತು ನೀಡಬೇಕು. ಒಟ್ಟಾರೆ ಕೃಷಿ ವೆಚ್ಚವನ್ನು ಕಡಿತ ಮಾಡಬೇಕು. ಆಗ ಮಾತ್ರ ಇದು ಲಾಭದಾಯಕವಾಗಲು ಸಾಧ್ಯ ಎಂದ ಅವರು ಈ ಹಿನ್ನೆಲೆಯಲ್ಲಿ ಕೃಷಿ ಯಂತ್ರಗಳನ್ನು ರೈತರು ಪರಸ್ಪರ ಹಂಚಿಕೊಂಡು ಕಾರ್ಯನಿರ್ವಹಿಸಬೇಕು. ಇದಕ್ಕೆ ಆನ್ ಲೈನ್ ಸಂಪರ್ಕ ಜಾಲ ಸಿದ್ಧವಾಗಬೇಕು ಎಂದು ವಿಶ್ಲೇಷಿಸಿದರು.

ರೈತರ ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕವಾದ, ನ್ಯಾಯಯುತವಾದ ಬೆಲೆ ನಿಗದಿಪಡಿಸಿ, ಕಾರ್ಯರೂಪಕ್ಕೆ ತರುವುದು ಸವಾಲಿನ ಕೆಲಸವಾಗಿದೆ. ಉತ್ಪಾದನಾ ವೆಚ್ಚ ಕಂಡು ಹಿಡಿದು ರೈತರಿಗೆ ನ್ಯಾಯಯುತ ಬೆಲೆ ಕೊಡಿಸುವುದು ಕೂಡ ಸವಾಲಿನ ಕೆಲಸ ಎಂದು ಹೇಳಿದರು.

ಇಂದು ಕೇಂದ್ರ ಸರ್ಕಾರ 17 ಬೆಳೆಗಳಿಗೆ ಬೆಂಬಲ ಬೆಲೆ ಘೋಷಿಸಿದೆ. ಈ 17 ಬೆಳೆಗಳ ಉತ್ಪಾದನಾ ವೆಚ್ಚವನ್ನು ಆಯೋಗ ಕಳೆದ ವರ್ಷ ಸಿದ್ಧಪಡಿಸಿದ್ದು ಇದಕ್ಕೆ ಹೋಲಿಸಿದರೆ ಕೇಂದ್ರ ನೀಡುತ್ತಿರುವ ಸುಮಾರು 8-10 ಬೆಳೆಗಳ ಬೆಂಬಲ ಬೆಲೆ ಉತ್ಪಾದನಾ ವೆಚ್ಚಕ್ಕಿಂತ ಕಡಿಮೆಯಿದೆ. ಇದು ಹೋಗಬೇಕು ಎಂದ ಅವರು ಈ ಬಾರಿ 31 ಬೆಳೆಗಳ ಉತ್ಪಾದನಾ ವೆಚ್ಚವನ್ನು ಸಿದ್ಧಪಡಿಸಲಾಗುತ್ತಿದೆ.ಎಂದು ಹೇಳಿದರು.

ಈ ಎಲ್ಲಾ ಪ್ರಕ್ರಿಯೆಗಳ ನಂತರವೂ ನಿಗದಿಪಡಿಸಲಾದ ಬೆಲೆ ಆದಾಯಕವಾಗಿಲ್ಲ, ಕೆಲವು ಬೆಳೆಗಳಿಗೆ ಮಾತ್ರ ಬೆಂಬಲಬೆಲೆ ಘೋಷಿಸಲಾಗುತ್ತಿದೆ. ಬೆಂಬಲ ಬೆಲೆ ಅನೇಕ ಕೃಷಿ ಉತ್ಪನ್ನಗಳಿಗೆ ಸಿಗುವುದೇ ಇಲ್ಲ. ಈ ವ್ಯವಸ್ಥೆ ಇನ್ನಷ್ಟು ಸುಧಾರಣೆಗೊಳ್ಳಬೇಕು ಎಂದರು.

ಸಮಾರಂಭದಲ್ಲಿ ಉಪಸ್ಥಿತರಿದ್ದ ಬೆಲೆ ಆಯೋಗದ ರೈತ ಪ್ರತಿನಿಧಿ ಹನುಮನಗೌಡ ಬೆಳಗುರ್ಕಿ ಮಾತನಾಡಿ, ವಾಸ್ತವದ ನೆಲೆಗಟ್ಟಿನಲ್ಲಿ ಕೃಷಿ ಚಟುವಟಿಕೆಗಳ ಬಗ್ಗೆ ಚರ್ಚೆಗಳು ನಡೆಯಬೇಕು. ಕೃಷಿ ಕ್ಷೇತ್ರ ಇನ್ನಷ್ಟು ಯುವಜನತೆಯನ್ನು ಆಕರ್ಷಿಸುವಂತಾಗಬೇಕು. ಯುವಜನತೆ ಈ ಕ್ಷೇತ್ರಕ್ಕೆ ಬರಬೇಕೆಂದರೆ ಇಲ್ಲಿ ಲಾಭ ಬರುವಂತಾಗಬೇಕು ಎಂದರು. ಈ ಸಂದರ್ಭದಲ್ಲಿ ಆಯೋಗದ ವತಿಯಿಂದ ಪ್ರಕಟಿಸಲಾದ ಯಂತ್ರ ಬಳಕೆ, ವೆಚ್ಚ ಇಳಿಕೆ, ಮಳೆಯಾಶ್ರಿತ ಮತ್ತು ನೀರಾವರಿ ಭತ್ತದ ಬೇಸಾಯದಲ್ಲಿ ಯಾಂತ್ರೀಕರಣದ ಲಾಭದಾಯಕತೆ ಎಂಬ ಎರಡು ಮಡಿಕೆ ಪತ್ರಗಳನ್ನು ಬಿಡುಗಡೆಗೊಳಿಸಲಾಯಿತು.

ಕಾರ್ಯಕ್ರಮದಲ್ಲಿ ವಿವಿಯ ಡಾ| ಎಂ.ಕೆ.ನಾಯ್ಕ ಮತ್ತು ಡಾ| ಟಿ.ಎಚ್. ಗೌಡ, ಮ್ಯಾಮ್ಕೋಸ್ ಉಪಾಧ್ಯಕ್ಷ ಸುಬ್ರಹ್ಮಣ್ಯ ಯಡಗೆರೆ, ಪ್ರಗತಿಪರ ಕೃಷಿಕರಾದ ಆಶಾ ಶೇಷಾದ್ರಿ, ಜಿಲ್ಲಾ ಕೃಷಿ ಇಲಾಖೆಯ ಉಪ ನಿರ್ದೇಶಕ ಡಾ| ಕೆ.ಮಧುಸೂದನ್, ಜಿಲ್ಲಾ ತೋಟಗಾರಿಕಾ ಇಲಾಖೆಯ ಉಪ ನಿರ್ದೇಶಕ ಡಾ| ಎಂ.ವಿಶ್ವನಾಥ್ ಇದ್ದರು. ಸಹಾಯಕ ಪ್ರಾಧ್ಯಾಪಕ ವೈ.ಎಸ್. ರಮೇಶ್ ಸ್ವಾಗತಿಸಿದರು.



**ಶಿವಮೊಗ್ಗ: ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ಮಾಹಿತಿ ಕೇಂದ್ರವನ್ನು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ| ಟಿ.ಎನ್.ಪ್ರಕಾಶ್ ಕಮ್ಮರಡಿ ಉದ್ಘಾಟಿಸಿದರು.**

ಕೃಷಿ ಕ್ಷೇತ್ರದ ಉತ್ಪಾದನಾ ವೆಚ್ಚ ತಾಂತ್ರಿಕತೆ, ಮಾರುಕಟ್ಟೆ ಮಾಹಿತಿ ಸೇರಿದಂತೆ ರೈತರಿಗೆ ಕೃಷಿಯ ವಿವಿಧ ಮಾಹಿತಿ ನೀಡುವ ದೃಷ್ಟಿಯಿಂದ ಇಲ್ಲಿನ ಕೃಷಿ ಕೇಂದ್ರದಲ್ಲಿ ರಾಜ್ಯ ಕೃಷಿ ಬೆಲೆ ಆಯೋಗ ರೂಪಿಸಿರುವ ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ಮಾಹಿತಿ ಕೇಂದ್ರವನ್ನು ಆರಂಭಿಸಲಾಯಿತು.
ರೈತರು ಈ ವಿಷಯಕ್ಕೆ ಸಂಬಂಧಿಸಿದಂತೆ ದೂರದ ಬೆಂಗಳೂರಿಗೆ ಬರುವ ಬದಲು ಸ್ಥಳೀಯವಾಗಿ ಇಲ್ಲಿಯೇ ಇದನ್ನು ಪಡೆದುಕೊಳ್ಳಬಹುದು. ಈ ಕೇಂದ್ರದ ಆರಂಭದಿಂದ ವಿವಿ ವ್ಯಾಪ್ತಿಯ ರೈತರಿಗೆ ಬೀಜ, ಗೊಬ್ಬರ, ಕೃಷಿ ಮಾಹಿತಿ, ವೆಚ್ಚ ಮತ್ತು ಮಾರುಕಟ್ಟೆಗಳ ಕುರಿತು ಅಧಿಕೃತವಾಗಿ ವಿಸ್ತೃತ ಮಾಹಿತಿ, ಉತ್ಪಾದನಾ ವೆಚ್ಚದ ಲೆಕ್ಕಾಚಾರ, ಮಾರುಕಟ್ಟೆಯ ವಿವರಗಳು ದೊರೆಯಲಿದೆ. ಈ ಕೇಂದ್ರಕ್ಕೆ ಆಯೋಗವು ಇಬ್ಬರು ತಾಂತ್ರಿಕ ಸಿಬಂದಿ ಮತ್ತು ಮೂಲ ಸೌಕರ್ಯವನ್ನು ಒದಗಿಸಿದೆ. ಇವರಿಗೆ ತರಬೇತಿ ನೀಡಲಾಗಿದ್ದು, ಇವರು ಈ ವಿವಿ ವ್ಯಾಪ್ತಿಯಲ್ಲಿ ವಿವಿಧ ಕೃಷಿ ಬೆಳೆಯ ಉತ್ಪಾದನಾ ವೆಚ್ಚವನ್ನು ವೈಜ್ಞಾನಿಕವಾಗಿ ಲೆಕ್ಕ ಹಾಕಲಿದ್ದಾರೆ. ಈ ಮಾಹಿತಿಯನ್ನು ಆಧರಿಸಿಯೇ ಬೆಲೆ ಆಯೋಗ ತನ್ನ ವರದಿ ಸಿದ್ಧಪಡಿಸಲಿದೆ. ಇಲ್ಲಿನ ಕೇಂದ್ರದ ಮುಖ್ಯಸ್ಥರಾಗಿ ಸಹಾಯಕ ಪ್ರಾಧ್ಯಾಪಕ ವೈ. ಎಸ್. ರಮೇಶ್ ಕಾರ್ಯನಿರ್ವಹಿಸಲಿದ್ದಾರೆ.

**Deccan Herald**

Shivamogga

# Machines can reduce cost of agri production: Kammardi

## He stresses on need to strengthen marketing system

**SHIVAMOGGA: Karnataka State Agriculture Price Commission Chairman T N Prakash Kammardi has that the cost of agriculture production can be reduced through extensive use of machines in farming.**



Karnataka State Agriculture Price Commission Chairman T N Prakash Kammardi, farmer leaders H R Basavarajappa, Hanumana Gowda Belagurki and others at the inaugural ceremony of Cost of cultivation & Market Intelligence Cell at UAHS campus in Shivamogga on Saturday. DH photo

Inaugurating Cost of Cultivation & Market Intelligence Cell in a programme jointly organised by Karnataka State Agriculture Price Commission and University of Agricultural & Horticultural Sciences (UAHS) at Organic Farming Research centre auditorium, here on Saturday, he said, the use of agricultural machinery would reduce the production cost. So, the government is promoting agricultural mechanization. Agricultural machines are being given to small farmers on rental basis. With this, farmers can reduce their cost production and thus earn good profit, he said.

According to the data released by the Centre, one tractor is used in 17 hectares of land which is not a good sign. He advised farmers to utilise agricultural equipment on priority basis. He also admitted that there is a need to strengthen marketing system.

He claimed that the Commission is making an honest attempt to transform agriculture into a profitable industry and thus provide guarantee income to farmers. It is possible to find out the cost of production and fix price based on it. A report in this regard has been prepared covering 131 crops excluding sugarcane and it will be submitted to the government shortly, he added.

He said the cost of production of any agricultural product should be fixed after consulting farmers. A fair report has been prepared. The commission had identified the cost of production of around 17 crops last year. This year, the cost of production of 31 crops has been identified. However, the price fixed by the government is not so encouraging for farmers. The cost of production has increased even after fixing the support price. The support price will be announced for the selected crops. There is a need to strengthen the system, he added.

Hanumana Gowda Belagurki, member of the commission, regretted that the predictability of farm income has collapsed in the current society. So, many youths are not keen to take up agriculture. Besides, they are not getting required assistance from agricultural scientists of various universities in the state due to the less number of integrated agriculture universities. However, UAHS Shivamogga is an exception. He also said primary market is undisciplined but the secondary market is highly disciplined. For example, farmers don't know the actual price of ragi, wheat. But the prices of ragi malt, biscuits are known to all. So, the agriculture universities should come together and assess the virtual value of agriculture produce, he suggested.

Farmer leader H R Basavarajappa urged the government to make honest efforts to prevent farmer suicides due to crop loss. Besides, there is a need to provide guarantee income to food grains. The market system should be strengthened. Two booklets 'Profitability of mechanisation in rain-fed paddy cultivation and irrigated paddy cultivation' were released on the occasion.

UAHS Shivamogga Research Director M K Naik, Director of Extension T H Gowda, progressive farmer Asha Sheshadri, Joint Director of Agriculture Department K Madhusudhan, Deputy Director of Horticulture Department M Vishwanath, Malnad Areca Marketing Co-operative Society Ltd Vice-President Subramanya Yadagere and others were present.

DH News Service